# ಪ್ರಾದೇಶಿಕ ಪಕ್ಷಗಳ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಿಶ್ಲೇಷಣೆ ಹಣಕಾಸಿನ ವರ್ಷ (ಹವ)2011–12ರಿಂದ 2016–16ರವರೆಗೆ

**ಪರಿಚಯ**

ವಾಣಿಜ್ಯ ಕೈಗಾರಿಕಾ ಮತ್ತು ವ್ಯವಹಾರದ ಉದ್ಯಮಿಗಳಿಗೆ **ಲೆಕ್ಕಪತ್ರಗಳನ್ನಿಡುವ ಮಾನದಂಡಗ**ಳನ್ನು **ಇಂಡಿಯನ್ ಚಾರ್ಟರ್ಡ್ಸ್ ಅಕೌಂಟೆಂಟ್ ಆಫ್** ಇಂಡಿಯ **(ICAI)** ನೀಡಿದೆ. ರಾಜಕೀಯ ಪಕ್ಷಗಳು ವಾಣಿಜ್ಯೇತರ, ಕೈಗಾರಿಕೇತರ ಮತ್ತು ವ್ಯಾಪರೇತರವಲ್ಲದ ಘಟಕದ ಅಡಿಯಲ್ಲಿ ಬರುತ್ತವೆ. ಹೀಗಾಗಿ ಇತರ ಸಂಸ್ಥೆಗಳ **ಪ್ರಮಾಣಿತ ಲೆಕ್ಕಪತ್ರ ಸ್ವರೂಪ**ಗಳು ರಾಜಕೀಯ ಪಕ್ಷಗಳಿಗೆ **ಅನ್ವಯವಾಗುವುದಿಲ್ಲ**.

ರಾಜಕೀಯ ಪಕ್ಷಗಳ ಲೆಕ್ಕಪತ್ರ ನಿರ್ವಹಣೆ ಅಕೌಂಟಿಂಗ್ ಮತ್ತು ಲೆಕ್ಕ ಪರಿಶೋಧನೆ ಅಭ್ಯಾಸಗಳಲ್ಲಿ **ಏಕರೂಪತೆಯನ್ನು** ತರಲು ಐಸಿಎಐನಿಂದ ಶಿಫಾರಸು ಮಾಡಲು **ಭಾರತ ಚುನಾವಣಾ ಆಯೋಗ (ಇಸಿಐ)** ವಿನಂತಿಸಿತು.

ಆದ್ದರಿಂದ ರಾಜಕೀಯ ಪಕ್ಷಗಳ ಹಣಕಾಸಿನಲ್ಲಿ ಲೆಕ್ಕಪತ್ರ ನಿರ್ವಹಣೆ ಮತ್ತು ಲೆಕ್ಕ ಪರಿಶೋಧನೆ **ಮಾನದಂಡ**ಗಳನ್ನು ಸುಧಾರಿಸಲು ಮತ್ತು **ಪಾರದರ್ಶಕತೆ ಸುಧಾರಿಸಲು** "ರಾಜಕೀಯ ಪಕ್ಷಗಳ ಲೆಕ್ಕಪತ್ರ ನಿರ್ವಹಣೆ ಮತ್ತು ಲೆಕ್ಕ ಪರಿಶೋಧನೆ (ಆಡಿಟಿಂಗ್) ಮಾರ್ಗದರ್ಶನ" ಅಥವಾ "ಲೆಕ್ಕ ಪರಿಶೋಧಕ ಮಾರ್ಗಸೂಚಿ"ಗಳನ್ನು **ಫೆಬ್ರವರಿ 2012**ರಲ್ಲಿ ಇಸಿಐ ವಿನಂತಿಯ ಮೇರೆಗೆ ICAI ರೂಪಿಸಿತು. ಈ **ಮಾರ್ಗದರ್ಶನಗಳು** ರಾಜಕೀಯ ಪಕ್ಷಗಳ ಹಣಕಾಸಿನ ಹೇಳಿಕೆಗಳಲ್ಲಿ ಆದಾಯ, ಖರ್ಚು, ಸ್ವತ್ತುಗಳು ಮತ್ತು ಹೊಣೆಗಾರಿಕೆಗಳನ್ನು ಗುರುತಿಸುವ, ಅಳೆಯುವ ಮತ್ತು ಬಹಿರಂಗಗೊಳಿಸುವ ನಿಯಮಗಳನ್ನು ನೀಡಿದೆ.

ಈ ವರದಿಯು **ಹಣಕಾಸಿನ ವರ್ಷ 2011–12ರಿಂದ 2015–16**ರವರೆಗೆ **22 ಪ್ರಾದೇಶಿಕ ಪಕ್ಷಗಳು ಘೋ**ಷಿಸಿರುವ **ಸ್ವತ್ತು ಮತ್ತು ಭಾದ್ಯತೆ**ಗಳನ್ನು ವಿಶ್ಲೇಷಣೆ ಮಾಡುತ್ತದೆ. – AAP, AGP, AIADMK, AIFB, BPF, DMDK, DMK, JKPDP, JDS, JDU, JMM, JVM(P), LJP, MNS, RLD, SAD, SFD, Shiv Sena (SHS), SP, TDP, TRS, YSR-Congress.

## ಕಾರ್ಯನಿರ್ವಾಹಕ ವರದಿ

**ಪದೇ ಪದೇ ಕೇಳಲಾಗುವ ಪ್ರಶ್ನೆಗಳು :**

- **ಬ್ಯಾಲೆನ್ಸ್ ಶೀಟ್ (ಆಯ–ವ್ಯಯ ಪತ್ರ)** ಎಂದರೇನು ?

**ಬ್ಯಾಲೆನ್ಸ್ ಶೀಟ್ (ಆಯ–ವ್ಯಯ ಪತ್ರ)** ಸಂಸ್ಥೆಯಲ್ಲಿರುವ ಮೂರು ಪ್ರಮುಖ ಹಣಕಾಸಿನ ಅಂಶಗಳ ಮಾಹಿತಿಯನ್ನು ಹೊಂದಿರುತ್ತದೆ. ಈ ಸಂದರ್ಭದಲ್ಲಿ ಅದು ರಾಜಕೀಯ ಪಕ್ಷವಾಗಿರುತ್ತದೆ.

ಅ) ಪಕ್ಷದ **"ಆಸ್ತಿಗಳು"** ಎಂದರೆ ನಗದು, ಅವುಗಳ ಬ್ಯಾಂಕ್ ಹೂಡಿಕೆಗಳು, ಚರ ಮತ್ತು ಸ್ಥಿರ ಆಸ್ತಿಗಳು, ವಾಹನಗಳು, ಇತ್ಯಾದಿ.

ಆ) ಆಯವ್ಯಯದ **"ಬಂಡವಾಳ"** ಅಥವಾ **"ಮೀಸಲು ನಿಧಿ"**ಯ ಭಾಗವು ರಾಜಕೀಯ ಪಕ್ಷದಲ್ಲಿ ಸಂಗ್ರಹವಾದ ಸಂಪತ್ತಾಗಿದ್ದು, ಭಾದ್ಯತೆಯನ್ನು ಒಳಗೊಂಡಿರುವುದಿಲ್ಲ.

ಇ) ರಾಜಕೀಯ ಪಕ್ಷದ **"ಹೊಣೆಗಾರಿಕೆಗಳು/ಭಾದ್ಯತೆ"** ಭಾಗದಲ್ಲಿ ಬ್ಯಾಂಕಿನಿಂದ ಪಡೆದ ಎರವಲು/ಸಾಲ, ಅಸುರಕ್ಷಿತ ಸಾಲಗಳು, ಓವರ್‌ಡ್ರಾಫ್ಟ್ ಪಡೆಯುವ ಸೌಲಭ್ಯಗಳು, ಇತ್ಯಾದಿ, ಒಳಗೊಂಡಿರುತ್ತದೆ.

*** ರಾಜಕೀಯ ಪಕ್ಷಗಳ ಸ್ವತ್ತುಗಳು ಮತ್ತು ಭಾದ್ಯತೆಗಳು/ಆದಾಯ ಮತ್ತು ಖರ್ಚುಗಳ ವಿಶೇಷತೆ ಏನು ?**

ಲೆಕ್ಕಪರಿಶೋಧಕ ಮಾನದಂಡಗಳನ್ನು ಸಂಸ್ಥೆಯ ಸ್ವಾಭಾವಿಕ ಚಟುವಟಿಕೆಗಳನ್ನು ಮನಸ್ಸಿಲ್ಲಿಟ್ಟುಕೊಂಡು ಅದು ವಾಣಿಜ್ಯ ಕೈಗಾರಿಕೆ ಅಥವಾ ವ್ಯಾಪಾರವೆಂದು ಪರಿಗಣಿಸಿ ಲೆಕ್ಕಪರಿಶೋಧಕ ಮಾನದಂಡಗಳನ್ನು ರಚಿಸಲಾಗುತ್ತದೆ. ರಾಜಕೀಯ ಪಕ್ಷಗಳು ಯಾವುದೇ ವಾಣಿಜ್ಯ ಚಟುವಟಿಕೆಗಳನ್ನು ನಿರ್ವಹಿಸದಿದ್ದರೂ ಲೆಕ್ಕಪರಿಶೋಧಕ ಮಾನದಂಡದಲ್ಲಿ ಏಕರೂಪತೆಯ ನಿರೂಪಣೆಯನ್ನು ಕಾಪಾಡಿಕೊಳ್ಳುವ ಸಲುವಾಗಿ "ಲಾಭ ಮತ್ತು ನಷ್ಟ"ದ ಸ್ಥಳದಲ್ಲಿ "ಆದಾಯ ಮತ್ತು ಖರ್ಚು" ಎಂಬ ಪರಿಭಾಷೆಯನ್ನು ಸರಳವಾಗಿ ಮಾರ್ಪಡಿಸುವ ಮೂಲಕ ಅದನ್ನು ಇಟ್ಟುಕೊಳ್ಳಲಾಗಿದೆ.

- **ಇಸಿಐನ ಪಾರದರ್ಶಕತೆ ಮಾರ್ಗದರ್ಶನಗಳು ಯಾವುವು** ?

  **ಸಂವಿಧಾನ 324ನೇ ವಿಧಿಯು ಇಸಿಐಗೆ ಸಮಗ್ರ ಅಧಿಕಾರ**ವನ್ನು ನೀಡಿದೆ. ಇದು **ಸುಪ್ರಿಂಕೋರ್ಟ್ ತೀರ್ಪು** (ಎಐಆರ್ 1978 ಎಸ್‌ಸಿ 851)ರಲ್ಲಿ ಆಯೋಗಕ್ಕೆ ಮುಕ್ತ


ಮತ್ತು ನ್ಯಾಯೋಚಿತ ಚುನಾವಣೆಗಳನ್ನು ಉತ್ತೇಜಿಸಲು ಮತ್ತು **ಕಾನೂನು ಬದ್ಧ ಕೊರತೆ**ಯನ್ನು ನೀಗಿಸುವ ಅಧಿಕಾರವಿದೆ ಎಂದು ಹೇಳುವ ಮೂಲಕ ಸ್ಥಾಪಿಸಲ್ಪಟ್ಟಿತು. 2014ರಲ್ಲಿ ಹೊರಡಿಸಿದ ಪಾರದರ್ಶಕತೆ ಮಾರ್ಗಸೂಚಿಗಳು ಮಾನ್ಯತೆ ಪಡೆದ ಎಲ್ಲಾ ಪಕ್ಷಗಳೊಡನೆ ಸಮಾಲೋಚಿಸಿದ ನಂತರ ನೀಡಿದ ಕಾನೂನುಬದ್ಧ ಸೂಚನೆಗಳಾಗಿದ್ದವು ಮತ್ತು ಆದ್ದರಿಂದ ಅವುಗಳನ್ನು ಪಾಲಿಸಬೇಕಾಗಿದೆ. ರಾಜಕೀಯ ಪಕ್ಷಗಳಲ್ಲಿ ಹಣಕಾಸಿನ ಪಾರದರ್ಶಕತೆ ಸುಧಾರಿಸಲು ಈ ಮಾರ್ಗಸೂಚಿಗಳನ್ನು ರಚಿಸಲಾಯಿತು. ಮತ್ತು ಫೆಬ್ರವರಿ 2012ಲ್ಲಿ ರೂಪಿಸಿ, ಹೊರಡಿಸಲಾದ ಐಸಿಎಐ ಮಾರ್ಗಸೂಚಿಗಳನ್ನು ಬಲವಾಗಿ ಪಾಲಿಸಲು ರಾಜಕೀಯ ಪಕ್ಷಗಳಿಗೆ ಸೂಚಿಸಲಾಗಿದೆ.

- **ಈ ವರದಿಯಲ್ಲಿ ಯಾವ ಮಾಹಿತಿಯನ್ನು ಸೆರೆಹಿಡಲಾಗಿದೆ?**

**22 ಪ್ರಾದೇಶಿಕ ರಾಜಕೀಯ ಪಕ್ಷಗಳು ಹಣಕಾಸಿನ ವರ್ಷ 2011–12 ರಿಂದ 2015–16ರ** ನಡುವಿನಲ್ಲಿ ಘೋಷಿಸಿದ ಸ್ವತ್ತುಗಳು, ಭಾದ್ಯತೆಗಳು ಮತ್ತು ಮೀಸಲು ನಿಧಿಯನ್ನು ವಿಶ್ಲೇಷಣೆಗಾಗಿ ಈ ವರದಿಯಲ್ಲಿ ತೆಗೆದುಕೊಳ್ಳಲಾಗಿದೆ. ಆಸ್ತಿಗಳೆಂದರೆ ಸ್ಥಿರಸ್ವತ್ತು, ಸಾಲಗಳು ಮತ್ತು ಮುಂಗಡ ಹಣ, ಹೂಡಿದ ಠೇವಣಿಗಳು, ಹೂಡಿಕೆಗಳು, ಇತ್ಯಾದಿ ಮತ್ತು ಭಾದ್ಯತೆಗಳೆಂದರೆ ಬ್ಯಾಂಕ್ ಸಾಲಗಳು, ವಿವಿಧ ಬಗೆಯ ಸಾಲದಾರರು, ಹೆಚ್ಚುವರಿ ಮುಂಗಡ, ಇತರ ಹೊಣೆಗಾರಿಕೆಗಳು, ಇತ್ಯಾದಿಗಳನ್ನು ಒಳಗೊಂಡಿದೆ. **ಬಂಡವಾಳ/ಮೀಸಲು ನಿಧಿ**ಯು, ಪ್ರತಿ ವರ್ಷದ ಒಟ್ಟು ಸ್ವತ್ತುಗಳಿಂದ **ಭಾದ್ಯತೆ**ಯನ್ನು ಕಳೆದ ಮೇಲೆ ಪಕ್ಷದ ಖರ್ಚಿಗಾಗಿ ನಿಗದಿ ಪಡಿಸಲಾದ ಮೊತ್ತವಾಗಿದೆ.

**ಪ್ರಾದೇಶಿಕ ಪಕ್ಷಗಳಿಂದ 2011–2015–16ರ ವರ್ಷದಲ್ಲಿ ಘೋಷಿಸಲಾದ ಆಸ್ತಿಗಳು :**

- **20 ಪ್ರಾದೇಶಿಕ ಪಕ್ಷಗಳು 2011–12**ರಲ್ಲಿ ಘೋಷಿಸಿದ ಸರಾಸರಿ ಆಸ್ತಿ **24.11 ಕೋಟಿ** ರೂಪಾಯಿದ್ದು **2015–16ಕ್ಕೆ 65.77 ಕೋಟಿ** ರೂಪಾಯಿಗೆ ಏರಿದ್ದವು.
- **ವೈಎಸ್.ಆರ್. ಕಾಂಗ್ರೆಸ್** ಮಾರ್ಚ್ **2011**ರಲ್ಲಿ ನೋಂದಣಿಯಾಯಿತು ಮತ್ತು **ಎಎಪಿ** ನವೆಂಬರ್ **2012**ರಲ್ಲಿ ನೋಂದಣಿಯಾಯಿತು. 2012–13ರ ಅವಧಿಯಲ್ಲಿ ಈ ಎರಡು ಪಕ್ಷಗಳು ಘೋಷಿಸಿದ ಸರಾಸರಿ ಆಸ್ತಿಗಳು ರೂ. **1.165 ಕೋಟಿ**ಯಾಗಿದ್ದು 2015–16ರ ವೇಳೆಗೆ ಇದು **3.765** ಕೋಟಿ ರೂಪಾಯಿಗೆ ಏರಿಕೆಯಾಗಿತ್ತು.





ಎಜಿಪಿ, ಬಿಪಿಎಫ್, ಜೆಕೆಪಿಡಿಪಿ, ಜೆಎಮೆಮ್, ಜೆವಿಎಮ್–ಪಿ, ಎಂಎನ್ಎಸ್ ಮತ್ತು ಟಿಆರ್ಎಸ್‌ಗಳ 2012–13 ಹವ ಆಯವ್ಯಯದ ಪತ್ರ ಸಾರ್ವಜನಿಕವಾಗಿ ಲಭ್ಯವಿಲ್ಲ. ಟಿಆರ್ಎಸ್‌ನ 2013–14 ಹವ ಆಯವ್ಯಯದ ಪತ್ರ ಸಾರ್ವಜನಿಕವಾಗಿ ಲಭ್ಯವಿಲ್ಲ.

- **2011–12ರ** ಸಾಲಿನಲ್ಲಿ **ಎಸ್.ಪಿ.** ಘೋಷಿಸಿದ ಆಸ್ತಿ **212.86** ಕೋಟಿ ರೂಪಾಯಿಗಳಾಗಿದ್ದು. ಇದು **2015–16ರ** ಹಣಕಾಸು ವರ್ಷಕ್ಕೆ **198%** ಅಷ್ಟು ಏರಿಕೆಯಾಗಿದ್ದು. **634.96** ಕೋಟಿ ರೂಪಾಯಿಗಳಾಗಿತ್ತು.

- **ಎಸ್.ಪಿ. ಎಐಎಡಿಎಂಕೆ. ಎಐಎಫ್‌ಬಿ ಹಾಗೂ ಎಸ್.ಹೆಚ್.ಎಸ್** ಸ್ಥಿರ ಏರಿಕೆಯನ್ನು ತೋರಿಸಿದ ಪ್ರಮುಖ ಪ್ರಾದೇಶಿಕ ಪಕ್ಷಗಳಾಗಿವೆ.


- **ಎಐಎಡಿಎಂಕೆಯ 2011–12 ಮತ್ತು 2015–16ರ** ನಡುವಿನ ಒಟ್ಟು ಆಸ್ತಿಯಲ್ಲಿ **155%** (ರೂ. **88.21** ಕೋಟಿಯಿಂದ ರೂ. **224.87** ಕೋಟಿಗೆ) ಹೆಚ್ಚಾಗಿದ್ದರೆ **ಎಸ್.ಹೆಚ್.ಎಸ್**. ರೂ. **20.59** ಕೋಟಿಯಿಂದ ರೂ. **39.568** ಕೋಟಿಗೆ **(92%)** ಹೆಚ್ಚಾಗಿದೆ.




- ಪ್ರಾದೇಶಿಕ ಪಕ್ಷಗಳು ಘೋಷಿಸಿದ ಆಸ್ತಿಗಳು **6 ಪ್ರಮುಖ ಭಾಗಗ**ಳಲ್ಲಿವೆ. ಸ್ಥಿರ ಸ್ವತ್ತುಗಳು, ಸಾಲ ಮತ್ತು ಮುಂಗಡಗಳು, FDR/ ಠೇವಣಿಗಳು ಟಿ.ಡಿ.ಎಸ್., ಹೂಡಿಕೆಗಳು ಮತ್ತು ಇತರ ಸ್ವತ್ತುಗಳು.

- **ಹವ 2011–12**ರಲ್ಲಿ ಪ್ರಾದೇಶಿಕ ಪಕ್ಷಗಳು ಘೋಷಿಸಿದ ಆಸ್ತಿಗಳು ಗರಿಷ್ಠ ಮೊತ್ತ FDR/ ಠೇವಣಿ ಅಡಿಯಲ್ಲಿದ್ದು ರೂ. **331.54** ಕೋಟಿಗಳಿಷ್ಟಿತ್ತು (ಒಟ್ಟಾರೆ ಆಸ್ತಿಯಲ್ಲಿ **ಶೇ. 68.77**ರಷ್ಟು) ಅದು **2015–16**ರಲ್ಲಿ ರೂ. **1054.80** ಕೋಟಿ (ಒಟ್ಟು ಆಸ್ತಿಯ **ಶೇ. 80.19ರಷ್ಟು**) ಏರಿಕೆಯಾಗಿತ್ತು.

- ಮೌಲ್ಯದಲ್ಲಿ **ಕಡಿತ**ವನ್ನು ತೋರಿಸುವ **ಏಕೈಕ ಆಸ್ತಿ** ವಿಭಾಗವು **"ಸಾಲಗಳು ಮತ್ತು ಅಡ್ವಾನ್ಸ್"** ಎಂಬುದನ್ನು ಗಮನಿಸಬೇಕು. **2011–12ರಲ್ಲಿ** ಪಕ್ಷಗಳು ರೂ. **19.75** ಕೋಟಿ ಬಂಡವಾಳ ಹೂಡಿವೆ ಮತ್ತು ಅದರ ಪ್ರಸ್ತುತ ಮೌಲ್ಯವು ರೂ. **16.20** ಕೋಟಿಯಾಗಿದೆ.





**ಪ್ರಾದೇಶಿಕ ಪಕ್ಷಗಳಿಂದ ಘೋಷಿಸಲ್ಪಟ್ಟ ಭಾದ್ಯತೆಗಳು ಹ.ವ. 2011–12 ರಿಂದ 2015–16:**

- 2011–12ರ ಸಾಲಿನಲ್ಲಿ 20 ಪ್ರಾದೇಶಿಕ ಪಕ್ಷಗಳು ಘೋಷಿಸಿದ **ಒಟ್ಟು ಭಾದ್ಯತೆಗಳು** (2011–12 ಮತ್ತು 2015–16ರ ಎರಡೂ ಅವಧಿಗಳಿಗೆ ಲಭ್ಯವಿದೆ) ಇದು 2011–12ರಲ್ಲಿ ರೂ. **47.475** ಕೋಟಿಗಳಿದ್ದು 2015–16ರಕ್ಕೆ ರೂ. **52.21** ಕೋಟಿಗೆ ಏರಿಕೆಯಾಗಿತ್ತು.

- ಹ.ವ. **2011–12**ರಲ್ಲಿ ಪ್ರತಿಪಕ್ಷದ ಸರಾಸರಿ ಭಾದ್ಯತೆಯು ರೂ. **2.37** ಕೋಟಿಗಳಿದ್ದು, ಹ.ವ. **2015–16**ರಲ್ಲಿ ಇದು ಪ್ರತಿ ಪಕ್ಷಕ್ಕೆ ರೂ. **2.61** ಕೋಟಿಯಾಗಿತ್ತು.

- 2012–13ರಲ್ಲಿ **ವೈಎಸ್.ಆರ್.–ಸಿ** ಮತ್ತು **ಎಎಪಿ**ಯ ಒಟ್ಟು ಭಾದ್ಯತೆಗಳು ರೂ. **1.86** ಕೋಟಿ (ಪ್ರತಿ ಪಕ್ಷಕ್ಕೆ ರೂ. **93** ಲಕ್ಷ) ಮತ್ತು ಹವ **2015–16**ರಲ್ಲಿ ಅದು ರೂ. **5.03 ಕೋಟಿಯಾಗಿತ್ತು (ಪ್ರತಿ ಪಕ್ಷಕ್ಕೆ ಸರಾಸರಿ ರೂ. 2.515 ಕೋಟಿ).**





ಎಜಿಪಿ, ಬಿಪಿಎಫ್, ಜೆಕೆಪಿಡಿಪಿ, ಜೆಎಮೆಮ್, ಜೆವಿಎಮ್–ಪಿ, ಎಂಎನ್ಎಸ್ ಮತ್ತು ಟಿಆರ್ಎಸ್‌ಗಳ 2012–13 ಹವ ಆಯವ್ಯಯದ ಪತ್ರ ಸಾರ್ವಜನಿಕವಾಗಿ ಲಭ್ಯವಿಲ್ಲ. ಟಿಆರ್ಎಸ್‌ನ 2013–14 ಹವ ಆಯವ್ಯಯದ ಪತ್ರ ಸಾರ್ವಜನಿಕವಾಗಿ ಲಭ್ಯವಿಲ್ಲ.


- ಹ.ವ. **2011–12ರಲ್ಲಿ ಎಸ್.ಹೆಚ್.ಎಸ್.** ಅತ್ಯಂತ ಹೆಚ್ಚಿನ ಭಾದ್ಯತೆ ಒಟ್ಟು ರೂ. **16.594** ಕೋಟಿಯನ್ನು ಘೋಷಿಸಿತು. ಅದರ ನಂತರ ಡಿ.ಎಂ.ಕೆ. ಯದು ರೂ. 9.214 ಕೋಟಿಗಳು.

- ಹ.ವ. **2015–16ರಲ್ಲಿ ಟಿ.ಆರ್.ಎಸ್.** ಪಕ್ಷವು ಗರಿಷ್ಠ ಭಾದ್ಯತೆ (ರೂ. **15.97** ಕೋಟಿ)ಯನ್ನು ಘೋಷಿಸಿತು. ಆದರೆ ಅದೇ ಪಕ್ಷ ಹವ **2011–12ರಲ್ಲಿ** ಹೊಣೆಗಾರಿಕೆಯನ್ನು ಶೂನ್ಯ ಎಂದು ಘೋಷಿಸಿತ್ತು. ಎರಡನೇ ಅತಿ ಹೆಚ್ಚಿನ ಭಾದ್ಯತೆಯಾದ ರೂ. **8.186**ಕೋಟಿಯನ್ನು **ಟಿ.ಡಿ.ಪಿ.** ಘೋಷಿಸಿತು.

- ಹವ **2013–14** ಮತ್ತು **2015–16ರ ಶಿವಸೇನ ಪಕ್ಷದ** ಭಾದ್ಯತೆಯು ಶೇ. **99.78**ರಷ್ಟು (ರೂ. **22.21ಕೋಟಿ)** ಕಡಿಮೆಯಾಗಿದ್ದರೆ ಟಿ.ಡಿ.ಪಿ.ಯದು ಶೇ. **259**ರಷ್ಟು **(ರೂ.5.906 ಕೋಟಿ) 2014–15** ಮತ್ತು **2015–16**ರ ನಡುವೆ ಹೆಚ್ಚಳವಾಗಿತ್ತು.





- ಪ್ರಾದೇಶಿಕ ಪಕ್ಷಗಳು ಘೋಷಿಸಿದ ಹೊಣೆಗಾರಿಕೆಗಳು **ಎರಡು ಪ್ರಮುಖ ವಿಭಾಗಗಳ** ಅಡಿಯಲ್ಲಿ ಬರುತ್ತವೆ. ಸಾಲಗಳು (ಬ್ಯಾಂಕಿನಿಂದ, ಹೆಚ್ಚುವರಿ ಮುಂಗಡ ಸೌಲಭ್ಯಗಳು ಮತ್ತು ವಿವಿಧ ಸಾಲಗಾರರಿಂದ) ಮತ್ತು ಇತರ ಭಾದ್ಯತೆಗಳು.
- **2011–12** ಮತ್ತು **2015–16**ರ ನಡುವೆ ಪ್ರಾದೇಶಿಕ ಪಕ್ಷಗಳು ಇತರ ಹೊಣೆಗಾರಿಕೆಗಳ ಅಡಿಯಲ್ಲಿ ರೂ. **42.47** ಕೋಟಿ **(ಹವ 2011–12)** ಯಿಂದ ರೂ. **32.20**ರ ಕೋಟಿಗೆ (ಹವ **2015–16**ರಲ್ಲಿ) **ಭಾದ್ಯತೆಯಲ್ಲಿ ಇಳಿಕೆಯನ್ನು** ಘೋಷಿಸಿದೆ. ಹೊಣೆಗಾರಿಕೆಯ **"ಸಾಲಗಳು"** ಅಡಿಯಲ್ಲಿ ಹವ 2011–12 (ರೂ. 5.006ಕೋಟಿ) ಮತ್ತು ಹವ 2015–16 (ರೂ. 42.47 ಕೋಟಿ) ನಡುವೆ ಶೇ 400ರಷ್ಟು ಅಥವಾ ರೂ. 20.034ರಷ್ಟು ಏರಿಕೆಯನ್ನು ತೋರಿಸಿದೆ.
- ಹವ **2011–12**ರಲ್ಲಿ **12 ಪ್ರಾದೇಶಿಕ ಪಕ್ಷ**ಗಳು **ಶೂನ್ಯ ಸಾಲ**ವನ್ನು ಘೋಷಿಸಿವೆ ಮತ್ತು **9 ಪಕ್ಷಗಳು** ಹ.ವ. **2015–16ರಲ್ಲಿ ಶೂನ್ಯ** ಸಾಲವನ್ನು ಘೋಷಿಸಿವೆ.



**ಹವ 2011–12 ರಿಂದ 2015–16ರಲ್ಲಿ ಪ್ರಾದೇಶಿಕ ಪಕ್ಷಗಳು ಘೋಷಿಸಿರುವ ಬಂಡವಾಳ:**


- ಹವ 2011–12ರ ಸಾಲಿನಲ್ಲಿ ಪ್ರಾದೇಶಿಕ ಪಕ್ಷಗಳು ಮೀಸಲಿಟ್ಟ ಬಂಡವಾಳ/ಮೀಸಲು ನಿಧಿಯು ರೂ. 434.635 ಕೋಟಿಗಳಾಗಿದ್ದು ಹವ 2015–16ರಲ್ಲಿ ರೂ. **823.535** ಕೋಟಿ (ಶೇ. 189.48ರಷ್ಟು) ಏರಿಕೆಯಾಗಿತ್ತು.
- ಹವ 2014–15 ಮತ್ತು 2015–16ರ ನಡುವೆ ಪ್ರಾದೇಶಿಕ ಪಕ್ಷಗಳು ಘೋಷಿಸಿದ ಬಂಡವಾಳ ಶೇ. 14.16ರಷ್ಟು ಅಥವಾ ರೂ. 160.90 ಕೋಟಿ ಹೆಚ್ಚಾಗಿದೆ.




ಎಜಿಪಿ, ಬಿಪಿಎಫ್, ಜೆಕೆಪಿಡಿಪಿ, ಜೆಎಮೆಮ್, ಜೆವಿಎಮ್–ಪಿ, ಎಂಎನ್‌ಎಸ್ ಮತ್ತು ಟಿಆರ್‌ಎಸ್‌ಗಳ 2012–13 ಹವ ಆಯವ್ಯಯದ ಪತ್ರ ಸಾರ್ವಜನಿಕವಾಗಿ ಲಭ್ಯವಿಲ್ಲ. ಟಿಆರ್‌ಎಸ್‌ನ 2013–14 ಹವ ಆಯವ್ಯಯದ ಪತ್ರ ಸಾರ್ವಜನಿಕವಾಗಿ ಲಭ್ಯವಿಲ್ಲ.

ಹವ 2015–16ರಲ್ಲಿ ಎಸ್.ಪಿಯು ಗರಿಷ್ಠ ಬಂಡವಾಳ ರೂ.634.913 ಕೋಟಿಯನ್ನು ಹೊಂದಿತ್ತು ತದನಂತರ ಡಿ.ಎಂ.ಕೆ. ಪಕ್ಷದ್ದು 257.18 ಕೋಟಿ ಹಾಗೂ ಎಐಎಡಿಎಂಕೆಯದ್ದು ರೂ. 224.84 ಕೋಟಿಯಷ್ಟಿತ್ತು.

ಹವ 2011–12ರಲ್ಲಿ ಟಿ.ಡಿ.ಪಿಯು ರೂ. 11.538 ಕೋಟಿ ರೂಪಾಯಿಗಳ ಒಟ್ಟು ಬಂಡವಾಳ ನಿಧಿಯನ್ನು ಘೋಷಿಸಿದ್ದು ಅದು ಹವ 2015–16ರಲ್ಲಿ ರೂ.46.09 ಕೋಟಿಗಳಿಗೆ ಏರಿಕೆಯಾಗಿತ್ತು. ಅಂದರೆ ರೂ. 34.552 ಕೋಟಿ ಅಥವಾ ಶೇ. 299 ರಷ್ಟು ಏರಿಕೆಯಾಗಿದೆ.




## ಎಡಿಆರ್‌ನ ಅವಲೋಕನ ಮತ್ತು ಶಿಫಾರಸ್ಸುಗಳು

**ಅವಲೋಕನಗಳು:**

1. ಐಸಿಎಐ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಪಕ್ಷಗಳು **ಸಾಲಗಳನ್ನು ತೆಗೆದುಕೊಂಡ ಹಣಕಾಸು ಸಂಸ್ಥೆಗಳ,** ಬ್ಯಾಂಕ್ ಅಥವಾ ಇತರ ಸಂಸ್ಥೆಗಳ **ವಿವರಗಳನ್ನು ಘೋಷಿಸ**ಬೇಕೆಂದು ನಿರ್ದೇಶಿಸಲ್ಪಟ್ಟಿವೆ. ಮಾರ್ಗದರ್ಶನಗಳ ಸೂಚನೆಯಂತೆ ಪಕ್ಷಗಳು "ಅವಧಿಸಾಲಗಳ ಮರು ಪಾವತಿಯ ನಿಯಮಗಳು" ಅಂದರೆ **ಮರು** ಪಾವತಿಯ ದಿನಾಂಕ ಒಂದು ವರ್ಷ, 1–5 ವರ್ಷಗಳು ಅಥವಾ 5 ವರ್ಷಗಳ ನಂತರ ಎಂಬುದನ್ನು ಹೇಳಬೇಕು. – **ಪ್ರಾದೇಶಿಕ ಪಕ್ಷಗಳಿಂದ ಘೋಷಿತವಾಗಿರುವುದಿಲ್ಲ.**
2. ಪಕ್ಷಗಳು ನಗದು/ ವಸ್ತು ರೂಪದಲ್ಲಿ ನೀಡಲಾದ ಸಾಲದ ವಿವರಗಳನ್ನು ನಿರ್ದಿಷ್ಟ ಪಡಿಸಬೇಕು ಮತ್ತು ಅಂತಹ ಸಾಲವು ಶೇ. 10ಕ್ಕಿಂತ ಹೆಚ್ಚಾಗಿದ್ದಲ್ಲಿ **ಸಾಲದ ರೂಪ** ಮತ್ತು ಅಂತಹ ಸಾಲಗಳ ಮೊತ್ತವನ್ನು ನಿರ್ದಿಷ್ಟವಾಗಿ ಪಕ್ಷಗಳು ಘೋಷಿಸಬೇಕು – **ಪ್ರಾದೇಶಿಕ ಪಕ್ಷಗಳಿಂದ ಘೋಷಿತವಾಗಿರುವುದಿಲ್ಲ.**
3. ರಾಜಕೀಯ ಪಕ್ಷಗಳ ಹಣಕಾಸು ಪಾರದರ್ಶಕತೆಯನ್ನು ಸುಧಾರಿಸಲು ರಾಜಕೀಯ ಪಕ್ಷಗಳ ಲೆಕ್ಕ ಪರಿಶೋಧನೆ ಬಗ್ಗೆ **ಐಸಿಎಐ ಮಾರ್ಗದರ್ಶನಗಳನ್ನು** ಇಸಿಐ **ದೃಢೀಕರಿಸಿದೆ.** ಆದರೆ ಇದು **ಮಾರ್ಗದರ್ಶನಗಳಾಗಿವೆಯೆ ಹೊರತು** ರಾಜಕೀಯ ಪಕ್ಷಗಳು ಇದನ್ನು ಆದಾಯದ ವಿವರಗಳನ್ನು ಬಹಿರಂಗ ಪಡಿಸುವ **ಕಡ್ಡಾಯ ವಿಧಾನ**ವೆಂದು ಸಕ್ರಿಯವಾಗಿ ಪಾಲಿಸಿಲ್ಲ. ಈ ಮಾರ್ಗದರ್ಶನಗಳು ರಾಜಕೀಯ ಪಕ್ಷಗಳ ಹಣಕಾಸಿನ ಹೇಳಿಕೆಗಳ ಸ್ವರೂಪವನ್ನು **ಪ್ರಮಾಣೀಕರಿಸು**ವ ಉದ್ದೇಶದ

ಜೊತೆಗೆ ಆದಾಯ, ವೆಚ್ಚ, ಸ್ವತ್ತು ತಮ್ಮ ಹೊಣೆಗಾರಿಕೆಯನ್ನು ಘೋಷಿಸುವುದನ್ನು ಸುಧಾರಿಸುವುದಾಗಿತ್ತು. **ಬಹಿರಂಗ ಪಡಿಸುವ ವಿವರಗಳ** ಸೇರ್ಪಡೆಯಲ್ಲಿ :

ಅ. ದಾನಿಗಳ ವಿವರಗಳ ಬಹಿರಂಗ ಪಡಿಸುವಿಕೆ ಮತ್ತು ವರ್ಗೀಕರಣ (ವ್ಯಕ್ತಿಗಳು, ಕಂಪನಿಗಳು, ಸಂಸ್ಥೆಗಳು ಮತ್ತು ಇತರರು) – **ಪ್ರಾದೇಶಿಕ ಪಕ್ಷಗಳು ವರ್ಗೀಕರಣ ಘೋಷಿಸಿರುವುದಿಲ್ಲ.**

**ಆ.** ವಿಭಿನ್ನ **ಮೌಲ್ಯಗಳ/ವರ್ಗಗಳ** ಕೂಪನ್ನುಗಳಿಂದ ಬಂದ ಆದಾಯವನ್ನು ಪ್ರತ್ಯೇಕವಾಗಿ ಬಹಿರಂಗಗೊಳಿಸಬೇಕು – **ಪ್ರಾದೇಶಿಕ ಪಕ್ಷಗಳು ಘೋಷಿಸಿರುವುದಿಲ್ಲ.**

**ಶಿಫಾರಸುಗಳು :**

1. ಪ್ರತಿ ಮೂರು ವರ್ಷಗಳಿಗೊಮ್ಮೆ ಲೆಕ್ಕ ಪರಿಶೋಧಕರನ್ನು ಬದಲಾಯಿಸುವುದು.

**ಅ.** 2013ರ ಆಗಸ್ಟ್ 29ರಂದು ಜಾರಿಗೊಳಿಸಲಾದ ಕಂಪನಿಗಳ ತಿದ್ದುಪಡಿ ಕಾಯಿದೆ, 2013, ಯಾವುದೇ ಕಂಪನಿ **5 ವರ್ಷಗಳಿಗಿಂತ ಹೆಚ್ಚು ಕಾಲ ಒಬ್ಬ ಲೆಕ್ಕ ಪರಿಶೋಧಕರನ್ನು ಅನ್ನು ಹೊಂದುವಹಾಗಿಲ್ಲ** ಎಂದು ಹೇಳಿದೆ. ಆದರೆ ಈ ನಿಯಮ **ರಾಜಕೀಯ ಪಕ್ಷಗಳಿಗೆ ಅನ್ವಯಿಸಲಾಗಿಲ್ಲ.** ಆದ್ದರಿಂದ ದೀರ್ಘಕಾಲದವರೆಗೆ ಪಕ್ಷಗಳ ಖಾತೆಗಳನ್ನು ಒಂದು ಲೆಕ್ಕಪರಿಶೋಧನೆಯ ಸಂಸ್ಥೆಗೆ/ವ್ಯಕ್ತಿಗೆ ಕೊಡುವುದು ಅನಪೇಕ್ಷಣೀಯ, ಕಾರಣ ಪಕ್ಷಗಳ ಹಣಕಾಸನ್ನು **ಅಪಾರದರ್ಶಕ ಮಾಡುವ ಸಾಧ್ಯತೆಗಳಿವೆ.**

ಆ. ಭಾರತೀಯ ಕಾನೂನುಗಳು **ವಿದೇಶಿ ಲೆಕ್ಕಪರಿಶೋಧನೆಯ ಸಂಸ್ಥೆಗಳಿಗೆ** ನೇರವಾಗಿ ಭಾರತದಲ್ಲಿ ಕಾರ್ಯನಿರ್ವಹಿಸಲು ಅನುಮತಿಸುವುದಿಲ್ಲ. ಆದರೆ **ಸ್ಥಳೀಯ ಲೆಕ್ಕಪರಿಶೋಧನೆಯ ಸಂಸ್ಥೆಗಳೊಡನೆ ಸಹಭಾಗಿತ್ವ** ಹೊಂದಬಹುದು. ಆ ಮೂಲಕ ಪಕ್ಷಗಳ ಆಂತರಿಕ ಲೆಕ್ಕಪತ್ರ ನಿರ್ವಹಣೆಗೆ **ವಿದೇಶಿ ಸಂಸ್ಥೆಗಳು** ಪ್ರವೇಶಿಸಬಹುದು.

ಇ. 255ನೆಯ ಕಾನೂನು ಆಯೋಗದ ವರದಿಯು ರಾಜಕೀಯ ಪಕ್ಷಗಳ ಖಾತೆಗಳನ್ನು **"ಕಂಟ್ರೋಲರ್ ಮತ್ತು ಆಡಿಟರ್ಸ್ ಜನರಲ್**ನಿಂದ ನಿರ್ವಹಿಸಲ್ಪಡುವ

**ಲೆಕ್ಕಪರಿಶೋಧಕರ ಸಮಿತಿಯಿಂದ** ಅರ್ಹ ಮತ್ತು ಅಭ್ಯಾಸ ಮಾಡುತ್ತಿರುವ ಚಾರ್ಟಡ್ ಅಕೌಂಟೆಂಟ್‌ನಿಂದ **ಲೆಕ್ಕಪರಿಶೋಧನೆ** ಮಾಡಿಸಬೇಕು" ಎಂದು ಶಿಫಾರಸು ಮಾಡಿದೆ. ಪ್ರಸ್ತುತ ರೂಡಿಯಲ್ಲಿರುವುದೇನೆಂದರೆ ರಾಜಕೀಯ ಪಕ್ಷಗಳು ತಮ್ಮ **ಲೆಕ್ಕಪರಿಶೋಧಕರನ್ನು ತಮ್ಮದೇ ಆದ ರೀತಿಯಲ್ಲಿ ಆಯ್ಕೆ** ಮಾಡಿಕೊಳ್ಳುತ್ತವೆ. ಇದು ಬದಲಾಗಬೇಕಿದೆ.

**2.** ರಾಜಕೀಯ ಪಕ್ಷಗಳ ಆದಾಯ–ವೆಚ್ಚದ ಹೇಳಿಕೆಗಳು (ರಾಷ್ಟ್ರೀಯ ಪಕ್ಷಗಳು ಕೂಡ) **ಅಪರೂಪವಾಗಿ ಪರಿಶೋಧನೆಗೊಂಡಿರುತ್ತವೆ.**. ಸಲ್ಲಿಸಿದಂತಹ ಲೆಕ್ಕಪತ್ರಗಳ ದೃಢೀಕರಣವು **ಸಂದೇಹಾಸ್ಪದವಾಗಿದೆ.** ಸತ್ಯತೆಯನ್ನು ಪರಿಶೀಲಿಸದಿದ್ದಾಗ ಆದಾಯ ಲೆಕ್ಕವನ್ನು

ಕಡಿಮೆಯಾಗಿ ವರದಿ ಮಾಡುವ ಲೆಕ್ಕಪರಿಶೋಧಕರು **ಶಿಕ್ಷೆಯ ವ್ಯಾಪ್ತಿಯಿಂದ ಹೊರಗುಳಿಯಬಹುದು**. ಆದಾಯ ತೆರಿಗೆಯ ರಿಟರ್ನ್ಸ್‌ನ್ನು ಆನ್‌ಲೈನ್ ಮೂಲಕ ಸಲ್ಲಿಸುವಾಗ ರಾಜಕೀಯ ಪಕ್ಷಗಳು ಆದಾಯ, ವೆಚ್ಚ ಮತ್ತು ಸ್ವತ್ತುಗಳು ಮತ್ತು ಭಾದ್ಯತೆಗಳನ್ನು ಲಗತ್ತಿಸುವುದಿಲ್ಲ. ಆದ್ದರಿಂದ ಆದಾಯ ತೆರಿಗೆ ಇಲಾಖೆಗೂ ರಾಜಕೀಯ ಪಕ್ಷಗಳ ಹಣಕಾಸು ಕುರಿತು ಸಾಕಷ್ಟು ಮಾಹಿತಿ ಇರುವುದಿಲ್ಲ! **ರಾಜಕೀಯ ಪಕ್ಷಗಳು ಸಲ್ಲಿಸಿದ ದಾಖಲೆಗಳ ವಾರ್ಷಿಕ ಪರಿಶೀಲನೆಗೆ ಶಿಫಾರಸು ಮಾಡುತ್ತಿದ್ದೇವೆ.**

3. 170ನೇ ಕಾನೂನು ಆಯೋಗದ ವರದಿಯು ರೆಪ್ರೆಸೆಂಟೇಷನ್ ಆಫ್ ಪೀಪಲ್ಸ್ ಆಕ್ಟ್ (RPA)ನ **ಸೆಕ್ಷನ್ 78A**ನ್ನು ಸೇರಿಸಲು ಮತ್ತು ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ತಪ್ಪು ಮಾಡುವ ರಾಜಕೀಯ ಪಕ್ಷಗಳಿಗೆ ದಂಡ ವಿಧಿಸಲು ಶಿಫಾರಸು ಮಾಡಿದೆ. ಇದನ್ನು ಸೇರಿಸಬೇಕು ಮತ್ತು ಜಾರಿಗೆ ತರಬೇಕು.

4. **ಆದಾಯ ತೆರಿಗೆ ಕಾಯಿದೆ ಸೆಕ್ಷನ್ 276cಯು** ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು ವಿಫಲರಾದ ವ್ಯಕ್ತಿಗಳಿಗೆ ದಂಡ ವಿಧಿಸುತ್ತದೆ. ಇದೇ **ರೀತಿಯ ಕಾನೂನುಗಳು** ರಾಜಕೀಯ ಪಕ್ಷಗಳಿಗೂ ಸಹ ಅನ್ವಯವಾಗಬೇಕು. ಸುಪ್ರೀಂಕೋರ್ಟು ಕಾಮನ್ ಕಾಸ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಹಾಗೂ ಇತರರು ತೀರ್ಪಿನಲ್ಲಿ ಪಕ್ಷಗಳು ತಮ್ಮ ಆದಾಯ ತೆರಿಗೆ ರಿಟರ್ನ್ಸ್‌ನ್ನು ಸಲ್ಲಿಸಲು ತಪ್ಪಿದಲ್ಲಿ ಮೇಲ್ನೋಟಕ್ಕೆ ಅವರು ಆದಾಯ ತೆರಿಗೆ ಕಾಯಿದೆಯನ್ನು ಉಲ್ಲಂಘಿಸಿದ್ದಾರೆ ಎಂದು ಹೇಳಿಕೆ ನೀಡಿತ್ತು.